# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನ ಸಭೆಯಿಂದ ಚುನಾಯಿತರು)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1392**

**ಉತ್ತರಿಸಬೇಕಾದ ದಿನಾಂಕ : 18-12-2025**

**ಉತ್ತರಿಸಬೇಕಾದ ಸಚಿವರು : ಸನ್ಮಾನ್ಯ ಮುಖ್ಯಮಂತ್ರಿಗಳು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ವಿವಿಧ ಸಹಕಾರ ಸಂಘಗಳ ಸಂಖ್ಯೆ ಎಷ್ಟು; ಈ ಸಂಘಗಳ ಪೈಕಿ ಸಾಲ ವಸೂಲಾತಿ ಸೇರಿ ಮತ್ತಿತರ ಕಾರಣಗಳಿಗಾಗಿ ನಷ್ಟದಲ್ಲಿರುವ ಸಹಕಾರ ಸಂಘಗಳು ಎಷ್ಟು; | ರಾಜ್ಯದಲ್ಲಿ ಒಟ್ಟು 47,763 ವಿವಿಧ ಸಹಕಾರ ಸಂಘಗಳಿವೆ. ಈ ಪೈಕಿ 14,798 ಸಹಕಾರ ಸಂಘಗಳು ಸಾಲ ವಸೂಲಾತಿ ಸೇರಿ ಮತ್ತಿತರ ಕಾರಣಗಳಿಗಾಗಿ ನಷ್ಟದಲ್ಲಿ ಇರುತ್ತವೆ. |
| ಆ) | ನಷ್ಟ ಅನುಭವಿಸಲು ಕಾರಣವಾದ ಅಂಶಗಳೇನು; (ವಿವರಗಳನ್ನು ಒದಗಿಸುವುದು) | 1. ಸಹಕಾರ ಸಂಘಗಳು ಸಂಘಕ್ಕೆ ಸದಸ್ಯರನ್ನಾಗಿ ನೋಂದಾಯಿಸಿಕೊಂಡು, ಸಂಘದ ಆರ್ಥಿಕ ವ್ಯವಹಾರವನ್ನು ವೃದ್ಧಿಗೊಳಿಸಲು ಸಂಘದ ಸದಸ್ಯರಿಗೆ ಅನುಕೂಲವಾಗುವ ದೃಷ್ಟಿಯಿಂದ ಉಪನಿಯಮದಂತೆ ಸಾಲವನ್ನು ಸದಸ್ಯರಿಗೆ ನೀಡಿರುತ್ತವೆ. ಆದರೆ, ಸದಸ್ಯರುಗಳು ತೆಗೆದುಕೊಂಡ ಸಾಲವನ್ನು ನಿಗಧಿತ ಸಮಯದಲ್ಲಿ ಸಂಘಕ್ಕೆ ಸಾಲ ಮರುಪಾವತಿ ಮಾಡದೆ ಇರುವ ಕಾರಣ.<br>2. ಸಂಘದಲ್ಲಿ ಸಾಲ ನೀಡಿ, ಸುಸ್ತಿಯಾದ ಸಾಲಗಳಿಗೆ ಪ್ರಥಮ ಆದ್ಯತೆ ನೀಡಿ, ಸಾಲವನ್ನು ವಸೂಲಿ ಮಾಡದೆ ಇರುವ ಕಾರಣ.<br>3. ಸಂಘದಲ್ಲಿ ಸಾಲ ನೀಡುವ ಸಮಯದಲ್ಲಿ ದಾಖಲೆಗಳನ್ನು ಪರಿಶೀಲಿಸದೆ ಆಸ್ತಿಗಳ ಮೌಲ್ಯಮಾಪನಕ್ಕಿಂತ ಹೆಚ್ಚಿನ ಮೊತ್ತದ ಸಾಲ ಮಂಜೂರಾತಿ ನೀಡುತ್ತಿರುವ ಕಾರಣ.<br>4. ಸಹಕಾರ ಸಂಘಗಳಲ್ಲಿ ಸಂಪನ್ಮೂಲ ಕೊರತೆ, ಠೇವಣಿ ಸಂಗ್ರಹಣೆಯಲ್ಲಿ ಇಳಿಮುಖ, ಇತರೆ ವಾಣಿಜ್ಯ ಬ್ಯಾಂಕುಗಳ ನಡುವೆ ಪೈಪೋಟಿಗಳಿಂದಾಗಿ ಹಾಗೂ ಹಣದುರುಪಯೋಗದಿಂದಾಗಿ.<br>5. ಸಹಕಾರ ಸಂಘಗಳಲ್ಲಿ ಕೆ.ಸಿ.ಸಿ ಮತ್ತು ಬಿಡಿಪಿ ಸಾಲ ವಸೂಲಾತಿ ಕುಂಠಿತಗೊಂಡಿರುವುದು, ಅತಿವೃಷ್ಟಿ ಮತ್ತು ಇನ್ನಿತರೆ ಕಾರಣಗಳು, ಆಡಳಿತಾತ್ಮಕ ವೆಚ್ಚಗಳು ಹೆಚ್ಚಾಗಿರುವುದು, ಸಹಕಾರ ಸಂಘಗಳು ಆರ್ಥಿಕವಾಗಿ ಲಾಭದಾಯಕವಾಗಿರುವ ವ್ಯವಹಾರಗಳನ್ನು ಕೈಗೊಳ್ಳದಿರುವುದು, ಸಹಕಾರ ಸಂಘಗಳಲ್ಲಿ ಮುದ್ದತ ಠೇವಣಿ ಇಡದೆ ಇರುವುದು, ಸಹಕಾರ ಸಂಘಗಳ ಭಾಗವಹಿಸುವಿಕೆಯಲ್ಲಿ ಜನರ ನಿರಾಸಕ್ತಿ, ಭದ್ರತೆ ಇಲ್ಲದೆ/ಜಾಮೀನು ಇಲ್ಲದೆ ಸಾಲ ನೀಡುವುದು.<br>6. ಸಹಕಾರ ಸಂಘಗಳಲ್ಲಿ ಸದಸ್ಯರು ಕನಿಷ್ಟ ವ್ಯವಹಾರ ಮಾಡದೆ ಇರುವುದು, ಸಂಘಗಳಲ್ಲಿ ವ್ಯಾಪಾರ ವಹಿವಾಟು ಕಡಿಮೆಯಾಗುತ್ತಿರುವುದು, ಅಭಿವೃದ್ಧಿ ಕ್ರಿಯಾ ಯೋಜನೆಯನ್ನು ರೂಪಿಸಿಕೊಳ್ಳದೇ ಕಾರ್ಯನಿರ್ವಹಿಸುತ್ತಿರುವುದು. |

| | | |
|---|---|---|
| | | 7. ಸಂಘದ ಆಡಳಿತ ಮಂಡಳಿ ಹಾಗೂ ಸಂಘದ ಸಿಬ್ಬಂದಿಗಳ ಕಾರ್ಯವೈಫಲ್ಯ, ಅಜಾಗರೂಕತೆ, ನಿರ್ಲಕ್ಷ್ಯತೆ ಹಾಗೂ ಸಂಘದ ಉಪನಿಯಮ ಹಾಗೂ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳನ್ವಯ ಕ್ರಮವಹಿಸದೆ ಇರುವುದು ಹಾಗೂ ಕಾರ್ಯವೈಫಲ್ಯ.<br>8. ಸಹಕಾರ ಸಂಘಗಳ ಉದ್ದೇಶಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸಲು ಅವಶ್ಯಕವಿರುವ ಬಂಡವಾಳದ ಕೊರತೆಯಿರುವುದು.<br>9. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೀಕೃತ ಬ್ಯಾಂಕುಗಳು, ಬ್ಯಾಂಕೇತರ ಸಾಲ ನೀಡುವ ಸಂಸ್ಥೆಗಳೊಂದಿಗೆ ಸ್ಪರ್ಧಾತ್ಮಕವಾಗಿ ಪತ್ತಿನ ವ್ಯವಹಾರದ ಸೇವೆಗಳನ್ನು ಸದಸ್ಯರಿಗೆ ನೀಡಲು ವಿಫಲರಾಗಿರುವುದು.<br>10. ಕಡಿಮೆ ಗುಣಮಟ್ಟದ ಹಾಲಿನ ಶೇಖರಣೆ, ನಗರೀಕರಣದಿಂದಾಗಿ ಹಾಲು ಉತ್ಪಾದಕರುಗಳ ಸಂಖ್ಯೆ ಕಡಿಮೆಯಾಗಿ ಹಾಲು ಸಂಗ್ರಹಣೆ ಕ್ರಮೇಣ ಕಡಿಮೆಯಾಗುತ್ತಿರುವುದು. ಸಂಘಗಳ ಮಟ್ಟದಲ್ಲಿ ಹಾಲು ಉತ್ಪಾದಕರು ಹೈನುಗಾರಿಕೆಯನ್ನು ತ್ಯಜಿಸಿ ಲಾಭದಾಯಕ ವಾಣಿಜ್ಯ ಬೆಳೆಗಳನ್ನು ಬೆಳೆಯುವುದು.<br>11. ಸಂಘವು ಸರಕು ಮತ್ತು ಸೇವೆಗಳನ್ನು ಗುಣಮಟ್ಟದಲ್ಲಿ ನೀಡಲು ವಿಫಲರಾಗಿರುವುದು.<br>12. ಮೂಲಭೂತ ಸೌಕರ್ಯಗಳ ಕೊರತೆ ಹಾಗೂ ನುರಿತ ಸಿಬ್ಬಂದಿಗಳ ಕೊರತೆಯಿರುವುದು. |
| ಇ) | ನಷ್ಟ ಅನುಭವಿಸಲು ಕಾರಣವಾದ ಸಹಕಾರ ಸಂಘಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು? | 1. ಸಾಲ ನೀಡಿ ವಸೂಲಾತಿ ಆಗದೆ ಇರುವ ಪ್ರಕರಣಗಳಲ್ಲಿ ಕಲಂ 69 ಮತ್ತು 70 ರಡಿ ದಾವೆ ದಾಖಲಿಸಿ, ಅದರಂತೆ ವಸೂಲಾತಿಗೆ ಕ್ರಮವಿಡಲು, ಒಂದು ವೇಳೆ ವಸೂಲಾಗದಿದ್ದ ಪಕ್ಷದಲ್ಲಿ ಅಮಲ್ಜಾರಿಗೆ ಕ್ರಮವಿಡಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರಡಿ ಅವಕಾಶ ಕಲ್ಪಿಸಲಾಗಿದೆ.<br>2. ಹಣದುರುಪಯೋಗದಿಂದ ನಷ್ಟ ಅನುಭವಿಸಿದ ಸಂಘಗಳಲ್ಲಿ ಶಾಸನ ಬದ್ಧ ಕಲಂ 65 ರಡಿ ಪರೀವೀಕ್ಷಣೆ, ಕಲಂ 64 ರಡಿ ವಿಚಾರಣೆ ಜರುಗಿಸಿ ಸಂಬಂಧಪಟ್ಟವರ ವಿರುದ್ಧ ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣ ದಾಖಲಿಸಿ ವಸೂಲಾತಿಗೆ ಕ್ರಮವಿಡಲಾಗುತ್ತಿದೆ.<br>3. ಹಣ ದುರುಪಯೋಗಕ್ಕೆ ಕಾರಣವಾದ ಸಹಕಾರ ಸಂಘದ ಆಡಳಿತ ಮಂಡಳಿಯ ಸದಸ್ಯರ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 29(ಸಿ)ರನ್ವಯ ಅನರ್ಹತೆಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>4. ಸಹಕಾರ ಸಂಘಗಳು ಆರ್ಥಿಕವಾಗಿ ಸಬಲಗೊಳ್ಳಲು ಸಂಘಗಳಲ್ಲಿ ವ್ಯಾಪಾರಾಭಿವೃದ್ಧಿ ಯೋಜನೆಯನ್ನು ರೂಪಿಸಲಾಗಿದೆ ಹಾಗೂ ಸಂಘದ ಸದಸ್ಯರುಗಳು ಕನಿಷ್ಟ 2 ವರ್ಷ ಕನಿಷ್ಟ ವ್ಯವಹಾರವನ್ನು ಮಾಡುವಂತೆ ಕಡ್ಡಾಯಗೊಳಿಸಿ ಸಹಕಾರ ಸಂಘಗಳ ಕಾಯ್ದೆಯಲ್ಲಿ ಅಳವಡಿಸಲಾಗಿರುತ್ತದೆ.<br>5. ಸ್ಥಗಿತ ಹಾಗೂ ಸಮಾಪನೆಗೊಂಡ ಸಂಘಗಳಿಗೆ ಸರ್ಕಾರದಿಂದ ಸಮಾಪನಾಧಿಕಾರಿಗಳನ್ನು ನೇಮಕಮಾಡಿ ಸಂಬಂಧಪಟ್ಟ ಸಂಘವನ್ನು ಮುಂದುವರೆಸುವ ಇಚ್ಛೆಯುಳ್ಳ ಸದಸ್ಯರ |

| | | |
|---|---|---|
| | | ಮನವಿಯನ್ನು ಪಡೆದು, ಸಂಬಂಧಪಟ್ಟ ಸಂಘದ ಸಮಾಪನಾಧಿಕಾರಿಗಳು ಸಂಘದ ಉಪನಿಯಮ ಹಾಗೂ ಸಹಕಾರ ಸಂಘಗಳ ಕಾಯ್ದೆ ನಿಯಮಗಳ ಪ್ರಕಾರ ನಡವಳಿ ಮಾಡಿ, ಪುನಶ್ಚೇತನ ಮಾಡಲು ಕ್ರಮವಹಿಸಲಾಗುತ್ತದೆ.<br><br>6. ಇಲಾಖೆಯಲ್ಲಿ ಸಂಘದ ಕಾರ್ಯದರ್ಶಿಗಳಿಗೆ ತ್ರೈಮಾಸಿಕ ಹಾಗೂ ಅರ್ಧವಾರ್ಷಿಕ ಸಭೆಗಳನ್ನು ಕರೆದು, ಪ್ರಗತಿ ಪರಿಶೀಲನೆಯನ್ನು ನಡೆಸಿ, ಸುಸ್ತಿಯಾದ ಸಾಲಗಳನ್ನು ವಸೂಲಿಗೆ ಮಾರ್ಗದರ್ಶನವನ್ನು ನೀಡಲಾಗುತ್ತಿದೆ ಹಾಗೂ ಸುಸ್ತಿಯಾದ ಸಾಲಗಳ ಬಗ್ಗೆ ಕಾಯ್ದೆಯಡಿ ದಾವ ದಾಖಲಿಸಿಕೊಂಡು, ವಸೂಲಿ ಮಾಡಲು ಆದ್ಯತೆ ಮೇರೆಗೆ ಸುಸ್ತಿದಾರರುಗಳಿಂದ ಸಾಲ ವಸೂಲಿ ಮಾಡಲು ಕ್ರಮವಿಡಲಾಗುತ್ತಿದೆ.<br><br>7. ನಷ್ಟದಲ್ಲಿರುವ ಕೃಷಿ ಪತ್ತಿನ ಸಹಕಾರ ಸಂಘಗಳ ಪುನಶ್ಚೇತನ ಕ್ಕೆ ಈ ಹಿಂದೆ ವೈದ್ಯನಾಥನ್ ಆಯೋಗದ ಶಿಫಾರಿಸ್ಸಿನ ಮೇರೆಗೆ ಹಣಕಾಸು ನೆರವು ನೀಡಲಾಗಿರುತ್ತದೆ. |

**ಸಂಖ್ಯೆ: ಸಿಒ 175 ಪಿಎಂಸಿ 2025**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ